■ ವಿಶಾಖ ಎನ್.

# ಆಗ ಐಶ್ವರ್ಯಾಗೂ ನೋವಾಗಿತ್ತು



ಐಶ್ವರ್ಯಾ ರೈ ಕೂಡ ಒಂದು ಕಾಲದಲ್ಲಿ ಕಂಗಾಲಾಗಿದ್ದವರೇ. ಸಿಮಿ ಗರೇವಾಲ್ ನಡೆಸಿಕೊಡುತ್ತಿದ್ದ ಟಿ.ವಿ. ಕಾರ್ಯಕ್ರಮದಲ್ಲಿ ಅವರೊಮ್ಮೆ ತಮ್ಮ ಹಳೆಯ ಬೇಸರದ ಸಂದರ್ಭವನ್ನು ಹಂಚಿಕೊಂಡಿದ್ದರು. ಅಚ್ಚರಿ ಎನ್ನುವಂತೆ ಅದು ಈಗ ವೈರಲ್ ಆಗುತ್ತಿದೆ. ಹಿಂದಿ ಚಿತ್ರರಂಗ ತಮ್ಮನ್ನು ಎಷ್ಟರಮಟ್ಟಿಗೆ ಮೂಲೆಗೆ ತಳ್ಳಿತ್ತು ಎಂದು ಪ್ರಿಯಾಂಕಾ ಚೋಪ್ರಾ ಅಲವತ್ತುಕೊಂಡ ಸಂದರ್ಭದಲ್ಲಿ ಐಶ್ವರ್ಯಾ ದುಃಖದ ಕಥಾನಕಕ್ಕೂ ಔಚಿತ್ಯ ಪ್ರಾಪ್ತಿಯಾಗಿದೆ. ಶಾರುಖ್ ಖಾನ್ ಹಾಗೂ ಐಶ್ವರ್ಯಾ ಇಬ್ಬರನ್ನೂ ಜೋಡಿಯಾಗಿಸಿ ಐದು ಸಿನಿಮಾಗಳು ತೆರೆಗೆ ಬರುವ ಸುದ್ದಿ ಒಂದು ಕಾಲದಲ್ಲಿ ಹರಡಿತ್ತು. ‘ವೀರ್ ಜರಾ’, ‘ಕಲ್ ಹೋ ನಾ ಹೋ’ ಕೂಡ ಅವುಗಳಲ್ಲಿ ಸೇರಿದ್ದವು. ಆದರೆ, ಐಶ್ವರ್ಯಾ ಆ ಸಿನಿಮಾಗಳಲ್ಲಿ ಅಭಿನಯಿಸಲಿಲ್ಲ. ಅದು ಅವರದ್ದೇ ನಿರ್ಧಾರವೋ ಅಥವಾ ಬೇರೆಯವರದ್ದಾಗಿತ್ತೋ ಎನ್ನುವ ಜಿಜ್ಞಾಸೆ ಇತ್ತು. ಸಿಮಿ ಗರೆವಾಲ್ ಅದನ್ನು ನೇರವಾಗಿ ಪ್ರಶ್ನೆಯ ರೂಪದಲ್ಲಿ ಕೇಳಿದ್ದರು. ಆಗ, ಐದು ಸಿನಿಮಾಗಳಿಂದ ಯಾವ ಕಾರಣವನ್ನೂ ನೀಡದೆ ತಮ್ಮನ್ನು ಹೊರಗಿಟ್ಟ ಸಂದರ್ಭವನ್ನು ಐಶ್ವರ್ಯಾ ಸ್ಮರಿಸಿಕೊಂಡರು.

‘ನನ್ನನ್ನು ಯಾವ ಕಾರಣಕ್ಕೆ ಹೊರಗೆ ಇಡುತ್ತಿದ್ದಾರೆ ಎನ್ನುವುದೇ ಗೊತ್ತಿರಲಿಲ್ಲ. ಅದನ್ನು ಕೆದಕಿ ಕೇಳುವ ಜಾಯಮಾನ ನನ್ನದಲ್ಲ. ದುಃಖವೇನೋ ಆಯಿತು. ಪ್ರಶ್ನೆಗಳೂ ಇದ್ದವು. ಹೀಗಾಗಿ ನಾನು ನೋವನ್ನೆಲ್ಲ ನುಂಗಿಕೊಂಡು ಇದ್ದುಬಿಟ್ಟೆ’ ಎಂದು ಐಶ್ವರ್ಯಾ ಹೇಳಿದ್ದರು.

ಶಾರುಖ್ ಖಾನ್ ಕೂಡ 2003ರಲ್ಲಿ ನೀಡಿದ್ದ ಒಂದು ಸಂದರ್ಶನದಲ್ಲಿ, ಸಬೂಬೇ ಹೇಳದೆ ಸಿನಿಮಾದಿಂದ ಯಾರನ್ನು ಹೊರಗೆ ಇಟ್ಟರೂ ಹೇಳಿಕೊಳ್ಳಲಾರದಷ್ಟು ದುಃಖ ಆಗುತ್ತದೆ ಎಂದಿದ್ದರು. ಐಶ್ವರ್ಯಾ ಹೆಸರನ್ನು ಪ್ರಸ್ತಾಪಿಸದೆಯೇ ಅವರು ಹಾಗೆ ಹೇಳಿದ್ದೂ ದೊಡ್ಡ ಸುದ್ದಿಯಾಗಿತ್ತು.

ಐಶ್ವರ್ಯಾ ಅಂತರ್ಮುಖಿ. ತಮ್ಮನ್ನು ಹೊರಗಿಟ್ಟಿದ್ದು ಯಾಕೆ ಎಂದು ಶಾರುಖ್ ಖಾನ್ ಅವರನ್ನೂ ಕೇಳುವ ಗೊಡವೆಗೆ ಅವರು ಹೋಗಲಿಲ್ಲ. ‘ಶಾರುಖ್ ಅವರನ್ನು ಕೇಳಬಹುದಿತ್ತಲ್ಲವೆ ಎಂದು ಅನೇಕರು ನನ್ನಲ್ಲಿ ಪ್ರಶ್ನೆ ಹಾಕಿದ್ದರು. ನನ್ನತನ ಅದಲ್ಲ. ಯಾರಿಗೋ ನಮ್ಮ ಅಭಿನಯ ಇಷ್ಟವಾಗದೇ ಇರಬಹುದು. ಎಲ್ಲವೂ ಬದುಕಿನಲ್ಲಿ ಪಾಠ ಕಲಿಸುತ್ತವೆ ಎಂದೇ ನಂಬಿದವಳು ನಾನು. ಅದು ನನ್ನನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಂತೂ ನಿಜ’ ಎಂದು ಅವರು ಮುಗುಮ್ಮಾಗಿದ್ದರು.

ಬಾಲಿವುಡ್‌ನ ಹಳೆಯ ಕಥೆಗಳೆಲ್ಲ ಸುಡುಧಗೆಯ ಈ ಹೊತ್ತಲ್ಲಿ ರೆಕ್ಕೆಪಡೆದುಕೊಂಡು ವಲಸೆ ಹಕ್ಕಿಗಳಂತಾಗುತ್ತಿವೆ. ■



# ‘ಬಾಬಾ’ ಸೋಲು... ಮನಿಷಾಗೆ ಮುಚ್ಚಿದ ಕದ

‘ಬಾಬಾ’ ಎಂಬ ತಮಿಳು ಸಿನಿಮಾ ಬಂದಿತ್ತು. ಸುರೇಶ್ ಕೃಷ್ಣ ಅದರ ನಿರ್ದೇಶಕ. ರಜನೀಕಾಂತ್ ನಾಯಕ. ಸಿನಿಮಾ ಇನ್ನಿಲ್ಲದಂತೆ ಮಕಾಡೆಯಾಗಿತ್ತು. ಹಾಗೆ ಆಗಿದ್ದೇ ಮನಿಷಾ ಕೊಯಿರಾಲಾ ತಮಿಳು ಚಿತ್ರಪಯಣಕ್ಕೆ ವಿರಾಮ ಬಿದ್ದಿತ್ತು.

ಆ ಸೋಲನ್ನು ಮನಿಷಾ ಮತ್ತೆ ಮೆಲುಕು ಹಾಕಿದರು. ರಜನಿಕಾಂತ್ ಜನ್ಮದಿನದ ಸಂದರ್ಭದಲ್ಲಿ ಆ ಸಿನಿಮಾ ಮರು ಬಿಡುಗಡೆಯಾಗಿ ಒಂದಿಷ್ಟು ಹಣ ಬಾಚಿಕೊಟ್ಟಿತು. ಅದು ಮೊದಲು ಬಿಡುಗಡೆಯಾಗಿದ್ದಾಗ ಅಷ್ಟೂ ಹಣ ಬಂದಿರಲಿಲ್ಲ ಎಂದು ಆಡಿಕೊಂಡವರೂ ಇದ್ದಾರೆ.

ಮನಿಷಾ ತಮಿಳಿನಲ್ಲಿ ‘ಇಂಡಿಯನ್’ ತರಹದ ಸೂಪರ್‌ಹಿಟ್ ಚಿತ್ರದ ಭಾಗವಾಗಿದ್ದವರು. ‘ಬಾಬಾ ಸಿನಿಮಾ ತೆರೆಕಾಣುವವರೆಗೆ ನನಗೆ ದಕ್ಷಿಣ ಭಾರತದ ಸಿನಿಮಾಗಳಲ್ಲಿ ಒಳ್ಳೆಯ ಅವಕಾಶಗಳು ಹುಡುಕಿಕೊಂಡು ಬಂದಿದ್ದವು. ಅದರ ಸೋಲಿನ ನಂತರ ಅಲ್ಲಿನ ಯಾರೂ ನನಗೆ ಅವಕಾಶವನ್ನೇ ನೀಡಲಿಲ್ಲ. ಅಲ್ಲಿಗೆ ನನಗೆ ದಕ್ಷಿಣ ಭಾರತ ಚಿತ್ರರಂಗದ ಕದ ಮುಚ್ಚಿತು ಎಂದು ಅರ್ಥವಾಗಿತ್ತು’ ಎಂದು ಮನಿಷಾ ಮುಕ್ತವಾಗಿ ಹೇಳಿದ್ದಾರೆ.

‘ಬಾಬಾ’ ಸೋಲಿನ ನಂತರ ‘ಮುಂಬೈ ಎಕ್ಸ್‌ಪ್ರೆಸ್’ ಸಿನಿಮಾದಲ್ಲಿ ಕಮಲ ಹಾಸನ್ ಪ್ರೀತಿಗೆ ಮಣಿದು ಅವರು ಸಣ್ಣ ಪಾತ್ರದಲ್ಲಿ ಅಭಿನಯಿಸಿದರಷ್ಟೆ. ■